ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**ಸಂಕೇತ ಸಂಖ್ಯೆ : 95-K**
**Code No. : 95-K**

**D**

**CCE PF**
**CCE PR**
**Revised & Unrevised**

**Question Paper Serial No. 10**

ಇಲ್ಲಿಂದ ಕತ್ತರಿಸಿ

# ವಿಷಯ : ಸಮಾಜಶಾಸ್ತ್ರ
# Subject : SOCIOLOGY

**(ಕನ್ನಡ ಭಾಷಾಂತರ / Kannada Version)**

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Fresh & Private Repeater)**

ದಿನಾಂಕ : 07. 04. 2020 ] [ Date : 07. 04. 2020

ಸಮಯ : ಬೆಳಗ್ಗೆ 9-30 ರಿಂದ ಮಧ್ಯಾಹ್ನ 12-45 ರವರೆಗೆ ] [ Time : 9-30 A.M. to 12-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 57 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. ನಾರಾಯಣ ಗುರುಗಳು ಮೊದಲು ಸಾಮಾಜಿಕ ಸುಧಾರಣ ಚಳುವಳಿಗೆ ಮುಂದಾಗಿದ್ದು

   (A) ಕರ್ನಾಟಕದಲ್ಲಿ

   (B) ಮಧ್ಯಪ್ರದೇಶದಲ್ಲಿ

   (C) ಕೇರಳದಲ್ಲಿ

   (D) ಆಂಧ್ರಪ್ರದೇಶದಲ್ಲಿ

2. ಎಸ್.ಎನ್.ಡಿ.ಟಿ. ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದವರು

   (A) ಮಹರ್ಷಿ ಕರ್ವೆ

   (B) ಎಂ.ಜಿ. ರಾನಡೆ

   (C) ಈಶ್ವರ ಚಂದ್ರ ವಿದ್ಯಾಸಾಗರ್

   (D) ರಾಜಾ ರಾಮ್‌ಮೋಹನ್ ರಾಯ್

3. ಆದಿವಾಸಿಗಳನ್ನು ಗಾಂಧೀಜಿಯವರು ಹೀಗೆ ಸಂಬೋಧಿಸಿದರು

   (A) ಬುಡಕಟ್ಟುಜನಾಂಗ

   (B) ಹರಿಜನರು

   (C) ಗಿರಿಜನರು

   (D) ಮಹರ್

4. ಭಾರತದ ಸಿಲಿಕಾನ್ ನಗರ

   (A) ಬೆಂಗಳೂರು

   (B) ಮುಂಬೈ

   (C) ದೆಹಲಿ

   (D) ಕೊಲ್ಕತ್ತ

5. ಪ್ರಜಾಪ್ರಭುತ್ವದ ಯಶಸ್ಸು ಅವಲಂಬಿಸಿರುವುದು ಆ ದೇಶದ ಜನರ

(A) ಅನಕ್ಷರತೆ ಪ್ರಮಾಣವನ್ನು

(B) ಬಡತನದ ಪ್ರಮಾಣವನ್ನು

(C) ಜೀವನ ಮಟ್ಟವನ್ನು

(D) ಶಿಕ್ಷಣವನ್ನು

6. ಸಾಮಾಜಿಕ ಬದಲಾವಣೆಯನ್ನು ತರುವ ಅತ್ಯಂತ ಪ್ರಭಾವಶಾಲಿ ಮಾಧ್ಯಮ

(A) ದೂರವಾಣಿ

(B) ಕರಪತ್ರ

(C) ವೃತ್ತಪತ್ರಿಕೆ

(D) ದೂರದರ್ಶನ

7. ರಷ್ಯನ್ನರನ್ನು ಪ್ರಭಾವಿತರಾಗುವಂತೆ ಮಾಡಿದ್ದು ಇವರ ತತ್ವಗಳು

(A) ವಾಲ್ಟೇರ್

(B) ರೂಸ್ಸೋ

(C) ಕಾರ್ಲ್ ಮಾರ್ಕ್ಸ್

(D) ಮಾಂಟೆ ಸ್ಕ್ಯೂ

8. ಸಿಖ್ ಧರ್ಮದ ಪ್ರತಿಪಾದಕ

(A) ರಣಜಿತ್ ಸಿಂಗ್

(B) ಮಾನ್ ಸಿಂಗ್

(C) ಗುರುನಾನಕ್

(D) ಹರಿಸಿಂಗ್

9. ಖೇಡಾ ಸತ್ಯಾಗ್ರಹದ ನೇತಾರರು

(A) ಸರ್ದಾರ್ ವಲ್ಲಭಭಾಯಿ ಪಟೇಲರು

(B) ವಿ.ಡಿ. ಸಾವರ್ಕರ್‌ರವರು

(C) ಮಹಾತ್ಮಾ ಗಾಂಧೀಜಿಯವರು

(D) ಜಯಪ್ರಕಾಶ್ ನಾರಾಯಣ್‌ರವರು

10. ಇಂದಿನ ಸಂಪರ್ಕ ಮಾಧ್ಯಮದಲ್ಲಿ ಒಂದು ಕ್ರಾಂತಿಯನ್ನು ತಂದೊಡ್ಡಿದ್ದು

(A) ರೇಡಿಯೋ

(B) ಗಣಕ ಯಂತ್ರ

(C) ದೂರ ಸಂವೇಧಿ ನಿಯಂತ್ರಕ

(D) ಅಂಚೆ ಪದ್ಧತಿ

II. 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

$5 \times 1 = 5$

| ***A* ಪಟ್ಟಿ** | ***B* ಪಟ್ಟಿ** |
|---|---|
| (A) ಚಂಪಾರಣ್ಯ ಸತ್ಯಾಗ್ರಹ | (i) ಆತ್ಮಾರಾಂ ಪಾಂಡುರಂಗ |
| (B) ಬರ್ದೋಲಿ ಸತ್ಯಾಗ್ರಹ | (ii) ಬಾಲಗಂಗಾಧರ್ ತಿಲಕ್ |
| (C) ಪ್ರಾರ್ಥನ ಸಮಾಜ | (iii) ದಯಾನಂದ ಸರಸ್ವತಿ |
| (D) ಸತ್ಯಶೋಧಕ ಸಮಾಜ | (iv) ಬಾಬಾಸಾಹೇಬ್ ಅಂಬೇಡ್ಕರ್ |
| (E) ಆರ್ಯ ಸಮಾಜ | (v) ಮಹಾತ್ಮಾ ಗಾಂಧೀಜಿ |
| | (vi) ಶ್ರೀರಮಾನಂದ |
| | (vii) ಜ್ಯೋತಿರಾವ್ ಫುಲೆ |
| | (viii) ಸರ್ದಾರ್ ವಲ್ಲಭಭಾಯಿ ಪಟೇಲರು |

III. **ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 15 × 1 = 15

12. ಅನಿಯೋಜಿತ ಸಾಮಾಜಿಕ ಬದಲಾವಣೆಗೆ ಒಂದು ಉದಾಹರಣೆ ನೀಡಿ.
13. ಸಾಮಾಜಿಕ ಬದಲಾವಣೆ ಎಂದರೇನು ?
14. ಆಧುನೀಕರಣ ಎಂದರೇನು ?
15. ಅನಕ್ಷರತೆಯು ಸಾಮಾಜಿಕ ಬದಲಾವಣೆಗೆ ಒಂದು ತೊಡಕು. ಏಕೆ ?
16. ಪ್ರಾದೇಶಿಕ ಅಸಮಾನತೆ ಎಂದರೇನು ?
17. ಜನರು ನಗರಗಳಿಗೆ ಏಕೆ ವಲಸೆ ಹೋಗುವರು ?
18. ಬಡವರು ಸಾಮಾನ್ಯವಾಗಿ ಸಾಮಾಜಿಕ ಬದಲಾವಣೆಯನ್ನು ವಿರೋಧಿಸುತ್ತಾರೆ. ಏಕೆ ?
19. ವಚನ ಚಳುವಳಿಯ ಪರಿಣಾಮವೇನು ?
20. 1872 ರ ವಿಶೇಷ ವಿವಾಹ ಕಾಯ್ದೆ ಒಂದು ಕ್ರಾಂತಿಕಾರಕ ಕಾಯ್ದೆ. ಏಕೆ ?
21. ಪಕ್ಕಾ ಆಹಾರ ಎಂದರೇನು ?
22. 'ವೇದಗಳಿಗೆ ಹಿಂದಿರುಗಿ' ಎಂದು ಕರೆ ಕೊಟ್ಟವರು ಯಾರು ?
23. ಭಾರತದ ಮೊಟ್ಟಮೊದಲ ಮಹಿಳಾ ರಾಷ್ಟ್ರಾಧ್ಯಕ್ಷರು ಯಾರು ?
24. ಸತಿ ಪದ್ಧತಿ ಎಂದರೇನು ?
25. ಬುಡಕಟ್ಟು ಎಂದರೇನು ?
26. ವಯಸ್ಕರ ಶಿಕ್ಷಣವನ್ನು ವಿವರಿಸಿ.

IV. **ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** 24 × 2 = 48

27. ಸಾಮಾಜಿಕ ಬದಲಾವಣೆ ತರುವಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಪಾತ್ರವೇನು ?
28. ಕೈಗಾರಿಕೀಕರಣದ ಪರಿಣಾಮವೇನು ?
29. ಪುನರಾವರ್ತಿತ ಮತ್ತು ದೀರ್ಘಾವಧಿಯ ಪರಿಣಾಮಗಳನ್ನು ವಿವರಿಸಿ.

30. ಭಾರತೀಯ ಸಮಾಜದಲ್ಲಿ ಸಾಮಾಜಿಕ ಬದಲಾವಣೆ ಅವಶ್ಯಕ. ಏಕೆ ?

31. ಜಾತಿ ಪದದ ಉಗಮದ ಬಗ್ಗೆ ಬರೆಯಿರಿ.

32. ಜಾತಿಯ ಗುಣಲಕ್ಷಣಗಳೇನು ?

33. ಸಾಮಾಜಿಕ ಚಳುವಳಿಯ ಉದ್ದೇಶಗಳೇನು ?

34. ದಂಗೆ ಅಥವಾ ಬಂಡಾಯಗಳು ಸ್ವರೂಪದಲ್ಲಿ ಸತ್ಯಾಗ್ರಹಕ್ಕಿಂತ ಭಿನ್ನವಾದದ್ದು. ಹೇಗೆ ?

35. ಮಹಿಳೆಯರ ಸ್ಥಾನಮಾನಕ್ಕಾಗಿ ಹೋರಾಡಿದ ಸಮಾಜ ಸುಧಾರಕರನ್ನು ಹೆಸರಿಸಿ.

36. ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಮಹಿಳೆಯರ ಪ್ರಗತಿಗಾಗಿ ಶ್ರಮಿಸಿದ ಮಹಿಳಾ ಸಂಘಟನೆಗಳಾವುವು ?

37. ಪಾಶ್ಚಾತ್ಯ ಸಂಸ್ಕೃತಿಯು ಭಾರತೀಯ ಸ್ತ್ರೀಯರ ಬಗ್ಗೆ ಹೊಂದಿದ್ದ ಧೋರಣೆ ಬದಲಿಸಿತು. ಹೇಗೆ ?

38. ರೇಡಿಯೋ ಒಂದು ಸಮೂಹ ಮಾಧ್ಯಮವಾಗಿ ಹೇಗೆ ಪಾತ್ರವಹಿಸುತ್ತದೆ ?

39. ಕರ್ನಾಟಕದಲ್ಲಿ ಬುಡಕಟ್ಟು ಅಧ್ಯಯನವನ್ನು ಮಾಡುತ್ತಿರುವ ಸಂಸ್ಥೆಗಳಾವುವು ?

40. ಸಮೂಹ ಮಾಧ್ಯಮಗಳ ಎರಡು ಪ್ರಾಕಾರಗಳಾವುವು ?

41. ಸಾಮಾಜಿಕ ಬದಲಾವಣೆಗೆ ಪ್ರೇರಕವಾದ ಪ್ರಮುಖ ಅಂಶಗಳಾವುವು ?

42. ಇಂದಿನ ಸಾಮಾಜಿಕ ಜೀವನದಲ್ಲಿ ರಾಜಕೀಯ ಪ್ರಜ್ಞೆ ಶಿಕ್ಷಣದ ಮೇಲೆ ಹೇಗೆ ಪ್ರಭಾವಬೀರುತ್ತದೆ ?

43. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಸಮೂಹ ಮಾಧ್ಯಮಗಳು ಪ್ರಮುಖ ಪಾತ್ರವಹಿಸುತ್ತವೆ. ಹೇಗೆ ?

44. ಬುಡಕಟ್ಟು ಜನಾಂಗಗಳ ಅವನತಿಗೆ ಕಾರಣಗಳೇನು ?

45. ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿದ ಸ್ತ್ರೀಯರನ್ನು ಹೆಸರಿಸಿ.

46. ಸ್ತ್ರೀಯರು ಇಂದು ಸಮಾನತೆಯತ್ತ ಸಾಗಿದ್ದಾರೆ. ದೃಢೀಕರಿಸಿ.

47. ಪ್ರತಿಭಟನಾತ್ಮಕ ಚಳುವಳಿಯ ನಾಲ್ಕು ಗುಣಲಕ್ಷಣಗಳನ್ನು ತಿಳಿಸಿ.

48. ಕ್ರಾಂತಿಕಾರಕ ಚಳುವಳಿಗಳೆಂದರೇನು ?

49. ಬುದ್ಧನ ಬಗ ಬರೆಯಿರಿ.

50. ಸಾಂಪ್ರದಾಯಿಕ ಮನಃಸ್ಥಿತಿಯು ಸಾಮಾಜಿಕ ಸುಧಾರಣೆಗೆ ಆತಂಕವಾಗಿದೆ. ಹೇಗೆ ?

V. **ಕೆಳಗಿನ ಪ್ರಶ್ನೆಗಳಿಗೆ *ಮೂರರಿಂದ* ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

51. ಸಾಮಾಜಿಕ ಬದಲಾವಣೆ ತರುವಲ್ಲಿ ಶಿಕ್ಷಣದ ಪಾತ್ರವನ್ನು ವಿವರಿಸಿ.

52. ಸಾಮಾಜಿಕ ಬದಲಾವಣೆಗೆ ಜಾತಿ ಹೇಗೆ ಅಡಚಣೆಯಾಗಿದೆ ?

53. ಸಾಮಾಜಿಕ ಚಳುವಳಿಗಳು ಸಾಮಾಜಿಕ ಬದಲಾವಣೆಯನ್ನು ಹೇಗೆ ತರುತ್ತವೆ ?

54. ಭಾರತ ಸ್ವಾತಂತ್ರ್ಯ ಚಳುವಳಿಯಲ್ಲಿ ಸ್ತ್ರೀಯರ ಪಾತ್ರವನ್ನು ವಿವರಿಸಿ.

55. ಬುಡಕಟ್ಟು ಸಮುದಾಯದ ಅಭಿವೃದ್ಧಿಗೆ ನಮ್ಮ ಸಂವಿಧಾನದಲ್ಲಿ ನೀಡಿರುವ ಸವಲತ್ತುಗಳಾವುವು ?

56. ಚಲನ ಚಿತ್ರಗಳು ಸಾಮಾಜಿಕ ಮೌಲ್ಯಗಳನ್ನು ಹೇಗೆ ಪ್ರತಿಬಿಂಬಿಸುತ್ತವೆ ?

VI. **ಕೆಳಗಿನ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** $1 \times 4 = 4$

57. ಭಾರತದಲ್ಲಿ ಸ್ತ್ರೀಯರ ಸ್ಥಾನಮಾನ ಉತ್ತಮಪಡಿಸುವಲ್ಲಿ ಕೈಗೊಂಡಿರುವ ಕಾನೂನಾತ್ಮಕ ಕ್ರಮಗಳೇನು ?